ಜೀವನವನ್ನೇ ಮುಗಿಸಿಬಿಡಬೇಕೆಂದು ಆ ಸೋದರಮಾವನು ಅವರ ಊಟದಲ್ಲಿ ವಿಷ ಸೇರಿಸಿದನು. ಅದನ್ನು ತಿಂದ ಪದ್ಮಪಾದರ ಉದರದಲ್ಲಿ ಸಹಿಸಲಸಾಧ್ಯವಾದ ಸಂಕಟವಾಯಿತು. ಆಗ ಅವರು ತಮ್ಮ ಆರಾಧ್ಯ ದೇವರಾದ ಶ್ರೀನೃಸಿಂಹಸ್ವಾಮಿಯನ್ನು ಸ್ಮರಿಸಿದರು. ಸ್ತೋತ್ರಮಾಡಿದರು. ಶ್ರೀನೃಸಿಂಹಸ್ವಾಮಿಯ ಕೃಪೆಯಿಂದ ಅವರ ಜೀವ ಉಳಿಯಿತು. ಆದರೆ ಪದ್ಮಪಾದರು ತಮ್ಮ ತತ್ತ್ವಪ್ರತಿಪಾದನಾ ಶಕ್ತಿಯನ್ನೂ, ಸ್ಮರಣ ಶಕ್ತಿಯನ್ನೂ ಕಳೆದುಕೊಂಡರು. ಕೂಡಲೇ ಅಹೋಬಿಲದಿಂದ ಶೃಂಗೇರಿಗೆ ಬಂದು ಗುರುಗಳಿಗೆ ಶಿರಬಾಗಿ ನಮಿಸಿ ಅಶ್ರುಧಾರೆ ಸುರಿಸಿದರು. ನಡೆದುದೆಲ್ಲವನ್ನೂ ಕೇಳಿ ಶಂಕರರು ವಾತ್ಸಲ್ಯದಿಂದ ಅವರನ್ನು ಆಲಂಗಿಸಿಕೊಂಡು, ಸಂತೈಸುತ್ತಾ, "ಚಿಂತಿಸಬೇಡ. ನನಗೆ ಅದನ್ನು ನೀನು ಓದಿದ್ದೆ. ನನ್ನ ಸ್ಮರಣ ಶಕ್ತಿಯಿಂದ ಅದನ್ನು ಮತ್ತೆ ಹಾಗೇ ಬರೆಯೋಣ" ಎಂದು ಪುನಃ ಹೇಳಿ ಬರೆಸಿದರು. ಗುರುಗಳ ಆಶೀರ್ವಾದದಿಂದ ಅವರ ಸ್ಮರಣ ಶಕ್ತಿಯು ಮೊದಲಿನಂತಾಯಿತು.

ಶಂಕರರು ದಿಗ್ವಿಜಯ ಮಾಡುತ್ತಾ ಸೌರಾಷ್ಟ್ರದೇಶದ ದ್ವಾರಕಾ ಕ್ಷೇತ್ರಕ್ಕೆ ಬಂದರು. ಇದು ಗುಜರಾತ್ ರಾಜ್ಯದ ಗೋಮತೀ ನದೀ ತೀರದಲ್ಲಿದೆ. ಅಲ್ಲಿ ಆಗ 'ಪಾಂಚರಾತ್ರ' ಮತದ ಪ್ರಭಾವ ಬಹಳವಾಗಿತ್ತು. ಆಚಾರ್ಯರು ಆ ಮತದ ದೋಷಗಳನ್ನು ತೋರಿಸಿ, ಅವುಗಳನ್ನು ದೂರೀಕರಿಸಿದರು. ಅಲ್ಲಿ ಒಂದು ಮಠವನ್ನು ಸ್ಥಾಪಿಸಿ ಆ ಪೀಠಕ್ಕೆ ಪದ್ಮಪಾದಾಚಾರ್ಯರನ್ನು ಪೀಠಾಧಿಪತಿಗಳನ್ನಾಗಿ ನೇಮಿಸಿದರು. ಅದು ಭಾರತದ ಪಶ್ಚಿಮದ ಆಮ್ನಾಯ ಪೀಠವಾಯಿತು. ಹಾಗೂ ಸಾಮವೇದ ಸಂಬಂಧ ಪಡೆದ ಪೀಠವಾಯಿತು.

(ಮುಂದುವರಿಯುತ್ತದೆ)

## ಪ್ರಹಸನ ಪ್ರಸಂಗ

ಈ ಜಗತ್ತಿನಲ್ಲಿ ಯೋಗ್ಯವಾದುದನ್ನು ಪಡೆಯಬೇಕಾದರೆ, ಅದನ್ನು ಪಡೆಯುವ ಯೋಗ್ಯತೆ ನಮಗಿರಬೇಕು. ಕೃತಕ ವ್ಯಕ್ತಿತ್ವವುಳ್ಳವರು ಕೃತಕವಾದುದನ್ನೇ ಬಯಸುತ್ತಾರೆ, ನೈಜತೆಯ ಸೌಂದರ್ಯವನ್ನು ಅವರು ಸವಿಯಲಾರರು. ಆದರೆ ಆಧ್ಯಾತ್ಮಿಕ ಜೀವನದಲ್ಲಿ ಇಂತಹ ಕೃತಕತೆ ನಡೆಯುವುದಿಲ್ಲ. ಅಲ್ಲಿ ಎಲ್ಲವೂ ಸಹಜ. ಇಂದಿನ ವಾಣಿಜ್ಯ ಯುಗದಲ್ಲಿ ಸಹಜತೆಯೂ ಅಸಹಜವಾಗುವಂತಾಗಿದೆ!

ಒಂದು ವಿಶ್ವವಿದ್ಯಾನಿಲಯದ ಭವ್ಯ ಕಟ್ಟಡದ ಮುಂದೆ ರಸ್ತೆಯ ಬದಿಯಲ್ಲಿ, ಒಬ್ಬನು ಕೆಲವು ಕಾಗದ ಪತ್ರಗಳನ್ನು ಇಟ್ಟುಕೊಂಡು ಕುಳಿತಿದ್ದನು. ರಸ್ತೆಯಲ್ಲಿ ಹೋಗುತ್ತಿರುವವರನ್ನೆಲ್ಲ ಕೈಬೀಸಿ ಕರೆಯುತ್ತಿದ್ದನು. ಅದೇ ರಸ್ತೆಯಲ್ಲಿ ಬರುತ್ತಿದ್ದ ಕುದುರೆ ಸವಾರನೊಬ್ಬನ ಗಮನ ಆ ವ್ಯಕ್ತಿಯ ಕಡೆ ಹರಿಯಿತು. ಆತ ಕುತೂಹಲದಿಂದ ಬಂದು "ಏನು ಆ ಪತ್ರಗಳು?" ಎಂದು ವಿಚಾರಿಸಿದನು.

"ಅವು ಡಿಗ್ರಿ ಸರ್ಟಿಫಿಕೆಟುಗಳು."

"ಓ! ಹೌದಾ! ಇಲ್ಲೇಕಿವೆ ಅವು?"

"ಮಾರಾಟಕ್ಕಿವೆ."

"ಎಷ್ಟು ಒಂದು ಸರ್ಟಿಫಿಕೆಟ್ಟಿಗೆ?"

"ನಿಮಗೆ ಯಾವ ಸರ್ಟಿಫಿಕೆಟ್ ಬೇಕು?"

"ಎಂ.ಎ. ಸರ್ಟಿಫಿಕೆಟ್."

"ಕೇವಲ ನೂರು ರೂಪಾಯಿ."

ಕುದುರೆ ಸವಾರನು ಕೂಡಲೆ ಜೇಬಿನಿಂದ ಹಣ ತೆಗೆದು ಕೊಟ್ಟು, ಒಂದು ಸರ್ಟಿಫಿಕೆಟ್ ತೆಗೆದುಕೊಂಡು ಹೊರಟನು. ಸ್ವಲ್ಪ ದೂರ ಹೋದಮೇಲೆ ತನ್ನ ಕುದುರೆಗೂ ಒಂದು ಸರ್ಟಿಫಿಕೆಟ್ ಕೊಂಡುಕೊಳ್ಳಬಹುದಲ್ಲ ಎನಿಸಿತು ಅವನಿಗೆ. ಆತ ಹಿಂದಿರುಗಿ ಬಂದು, "ನನ್ನ ಕುದುರೆಗಾಗಿ ಇನ್ನೊಂದು ಸರ್ಟಿಫಿಕೆಟ್ ಕೊಡಿ" ಎಂದು ಕೇಳಿದ.

ಆ ವ್ಯಕ್ತಿ : "ಇಲ್ಲ ಕೊಡಲಾಗುವುದಿಲ್ಲ."

ಕುದುರೆ ಸವಾರ : "ಏಕೆ ಆಗುವುದಿಲ್ಲ?"

ಆ ವ್ಯಕ್ತಿ : "ಈ ಸರ್ಟಿಫಿಕೇಟುಗಳಿರುವುದು ಎಮ್ಮೆಗಳಿಗಾಗಿ ಮಾತ್ರ!"

❖ ❖ ❖

ದೇವರು ನಮ್ಮ ಮಾತು ಮನಸ್ಸಿಗೆ ನಿಲುಕದ ವಿಷಯ. ಆದರೂ ಪ್ರತಿಯೊಬ್ಬರೂ ತಮ್ಮದೆ ಆದ ರೀತಿಯಲ್ಲಿ ದೇವರನ್ನು ಕಲ್ಪಿಸಿಕೊಳ್ಳಲು ಪ್ರಯತ್ನಿಸುತ್ತಾರೆ. ಹಾಗೆ ಕಲ್ಪಿಸಿಕೊಳ್ಳುವುದರಲ್ಲಿ ಏನೂ ತಪ್ಪಿಲ್ಲ. ಆದರೆ ತಮ್ಮ ಕಲ್ಪನೆಯೇ ಸತ್ಯ, ಅದನ್ನೇ ಎಲ್ಲರೂ ಒಪ್ಪಿಕೊಳ್ಳಬೇಕು, ಇಲ್ಲವೇ ಸಾಯಬೇಕು ಎಂದು ಭಾವಿಸುವುದು ಅತ್ಯಂತ ಮೂರ್ಖತನ ಮಾತ್ರವಲ್ಲ, ಬಾಲಿಶತನವೂ ಹೌದು.

ಒಂದು ಕ್ಲಾಸ್ ರೂಮಿನಲ್ಲಿ ಮಕ್ಕಳು ಚಿತ್ರ ಬಿಡಿಸುತ್ತಿದ್ದರು. ಉಪಾಧ್ಯಾಯನು ಸುತ್ತಾಡುತ್ತ ಯಾರ್‍ಯಾರು ಏನೇನು ಚಿತ್ರ ಬಿಡಿಸುತ್ತಿದ್ದಾರೆ ಎಂದು ಪರಿಶೀಲಿಸುತ್ತಿದ್ದ. ಓರ್ವ ಚಿಕ್ಕ ಹುಡುಗಿ ತುಂಬ ಆಸಕ್ತಿಯಿಂದ ಚಿತ್ರ ಬಿಡಿಸುತ್ತಿದ್ದಳು. ಉಪಾಧ್ಯಾಯನು ಆಕೆಯ ಹತ್ತಿರ ಹೋಗಿ, "ಏನು ಬರೆಯುತ್ತಿದ್ದೀಯೆ?" ಎಂದು ವಿಚಾರಿಸಿದ.

"ನಾನು ದೇವರ ಚಿತ್ರ ಬಿಡಿಸುತ್ತಿದ್ದೇನೆ"—ಹುಡುಗಿ ಹೇಳಿದಳು. ಉಪಾಧ್ಯಾಯನು ಚಕಿತನಾಗಿ, "ದೇವರು ಹೇಗಿದ್ದಾನೆಂದು ಯಾರಿಗೂ ತಿಳಿಯದು!" ಎಂದು ಪ್ರಶ್ನಾರ್ಥಕವಾಗಿ ಕೇಳಿದ.

ಹುಡುಗಿ ಕೂಡಲೆ ತಲೆ ಎತ್ತಿ ಉಪಾಧ್ಯಾಯನ ಕಡೆ ನೋಡಿ ಹೇಳಿದಳು : "ಇನ್ನು ಸ್ವಲ್ಪ ಹೊತ್ತಿನಲ್ಲಿಯೇ ಅವರಿಗೆ ತಿಳಿಯುತ್ತದೆ." ◆